ಇ) ಈ ಜಮೀನಿನ ಸುತ್ತಮುತ್ತಲು ಗ್ರಾಮದ ರೈತರುಗಳು ದನಕರುಗಳಿಗೆ ಹುಲ್ಲು ಮೇಯಿಸಲು ಉಪಯೋಗಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಆದಾಗ್ಯೂ ಈ ಜಮೀನಿನಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲು ಕಾರಣಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು. ಗುತ್ತಿಗೆ ನೀಡಲಾಗಿದೆ.

ಆ) ಶ್ರೀಮತಿ ಸುವರ್ಣ ಪಡಿಯಾರ್ ಎಂಬುವವರಿಗೆ ಕೋಡಿಹಳ್ಳಿ ಗ್ರಾಮದ ಸರ್ವೆ ನಂ–40ರ 80–00 ಎಕರೆ ಪ್ರದೇಶದಲ್ಲಿ ಬಳಪದಕಲ್ಲು ಗಣಿ ಗುತ್ತಿಗೆ (ಸಂಖ್ಯೆ:2273)ಯನ್ನು ದಿ:23–06–2000 ದಿಂದ 20 ವರ್ಷಗಳ ಅವಧಿಗೆ ನೀಡಲಾಗಿದೆ. ಗುತ್ತಿಗೆದಾರರ ಕೋರಿಕೆ ಮೇರೆಗೆ ಖನಿಜ ರಿಯಾಯಿತಿ ನಿಯಮ 1960ರ ನಿಯಮ–37 ರ ಮೇರೆಗೆ ಮೆ: ಮಾತಾ ಮೈನಿಂಗ್ ಕಂಪನಿ ಹೆಸರಿಗೆ ವರ್ಗಾಯಿಸಲಾಗಿದೆ.

ಇ) ಕೋಡಿಹಳ್ಳಿ ಗ್ರಾಮದ ಸರ್ವೆ ನಂ–40ರ ಒಟ್ಟು 433.11 ಎಕರೆ ಸರ್ಕಾರಿ ಗೋಮಾಳವಾಗಿದ್ದು, ಈ ಪೈಕಿ 80–00 ಎಕರೆ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿಲ್ಲವಾದ್ದರಿಂದ, ಗುತ್ತಿಗೆ ಮಂಜೂರು ಮಾಡಬಹುದೆಂದು ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ಇವರು ದಿ:03–07–1997ರ ಪತ್ರ ಸಂಖ್ಯೆ: ಐಎನ್ ಡಿಸಿಆರ್ 15/97–98ರಲ್ಲಿ ಶಿಫಾರಸ್ಸು ಮಾಡಿದ್ದರ ಮೇರೆಗೆ, ನಿಯಮಾನುಸಾರ ಗುತ್ತಿಗೆಯನ್ನು ಮಂಜೂರು ಮಾಡಲಾಗಿದೆ.

ಈ) ಅರ್ಜಿದಾರರು ಬಳಪದಕಲ್ಲು ಗಣಿಗುತ್ತಿಗೆ ಮಂಜೂರಾತಿಗಾಗಿ ನಿಯಮಾನುಸಾರ ಅರ್ಜಿಯನ್ನು ಸಲ್ಲಿಸಿದ್ದು, ಜಿಲ್ಲಾಧಿಕಾರಿಯವರ ನಿರಾಕ್ಷೇಪಣ ಪತ್ರವೂ ಸೇರಿದಂತೆ ಎಲ್ಲ ಅಗತ್ಯ ದಾಖಲೆಗಳನ್ನು ಪಡೆದು, ಎಂ.ಎಂ(ಡಿ.ಆರ್) ಆಕ್ಟ್ ಮತ್ತು ಖನಿಜ ರಿಯಾಯಿತಿ ನಿಯಮಾವಳಿಗಳನುಸಾರ ಪರಿಶೀಲಿಸಿ ಗಣಿಗುತ್ತಿಗೆಯನ್ನು ಮಂಜೂರು ಮಾಡಲಾಗಿರುತ್ತದೆ.

201 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕಂದಾಪುರದಲ್ಲಿ ಸರ್ಕಾರವು ನಿರ್ಮಿಸಲು ಉದ್ದೇಶಿಸಿದ್ದ ಮಾನವ ರಹಿತ ವಿಮಾನ ನಿಲ್ದಾಣದ ಕಾಮಗಾರಿ ಯಾವ ಹಂತದಲ್ಲಿದೆ;

ಆ) ಈ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮತ್ತು ಆ)

ರಕ್ಷಣಾ ಮಂತ್ರಾಲಯ ಭಾರತ ಸರ್ಕಾರದ ಸಂಸ್ಥೆಯಾದ DRDO ತನ್ನ ಸಂಶೋಧನಾ ಹಾಗೂ ಅಭಿವೃದ್ಧಿ ಚಟುವಟಿಕೆಗಾಗಿ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕಂದಾಪುರದಲ್ಲಿ ರಕ್ಷಣಾ ಸಂಶೋಧನಾ (VOD 79) ಯೋಜನೆಯನ್ನು ಕೈಗೊಂಡಿರುವುದು. ಈ ಯೋಜನೆ ಕಾಮಗಾರಿಯನ್ನು ಪ್ರಾರಂಭಿಸುವ ಕ್ರಮ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

285 ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಆಯವ್ಯದಲ್ಲಿ ಮಂಡಿಸಲಾದ ಒಟ್ಟು ಅನುದಾನವೆಷ್ಟು (ಇಲಾಖಾವಾರು ಯೋಜನಾವಾರು ವಿವರ ನೀಡುವುದು);

ಆ) 2009–10ನೇ ಸಾಲಿನ ಆಯವ್ಯದಲ್ಲಿ ಶೇಕಡ 18ರ ಮೀಸಲಾತಿಗೆ ಮೀಸಲಾಗಿರಿಸುವ ಅನುದಾನದ ಹಣವೆಷ್ಟು (ಯೋಜನೆವಾರು ವಿವರ ಒದಗಿಸುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) 2009–10ನೇ ಸಾಲಿನ ಆಯವ್ಯದಲ್ಲಿ ವಿವಿಧ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗಾಗಿ ಸಾಲ ಮರುಪಾವತಿ ಹೊರತುಪಡಿಸಿ 58859.50 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪ್ರಧಾನ ಲೆಕ್ಕ ಶೀರ್ಷಿಕೆವಾರು ಮಾಹಿತಿಯನ್ನು ಅನುಬಂಧ 'ಎ' ಯಲ್ಲಿ ನೀಡಲಾಗಿದೆ.

ಆ) 2009–10ನೇ ಸಾಲಿನ ಆಯವ್ಯದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಒದಗಿಸಿರುವ ಒಟ್ಟು ಅನುದಾನ 4061 ಕೋಟಿ ರೂ.ಗಳು. ಇಲಾಖಾವಾರು 'ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ' ಅನುದಾನವನ್ನು ಅನುಬಂಧ 'ಬಿ'ಯಲ್ಲಿ ನೀಡಲಾಗಿದೆ.